MVC No. 242/2023 - -

PW -1

ದಿನಾಂಕಃ 13.08.2026 ರಂದು ಸಾಕ್ಷಿಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 3 ನೇ ಎದುರುದಾರರ ಪರ ವಕೀಲರಿಂದ -

ಅಪಘಾತವಾದ ಕೂಡಲೇ ಅಣಜಿ ಆಸ್ಪತ್ರೆಗೆ ಹೋದೆನು. ಅಲ್ಲಿಂದ ಸಿಟಿ ಸೆಂಟ್ರಲ್ ಆಸ್ಪತ್ರೆಗೆ ಹೋದೆನು. ಸದರಿ ಎರಡೂ ಆಸ್ಪತ್ರೆಗಳಲ್ಲಿ ನಾನು ಹೇಳಿ ಬರೆಸಿದ ವಿಚಾರಗಳು ಸತ್ಯವಾಗಿವೆ. ನಿಪಿ-4 ರಲ್ಲಿ ಖಾಸಗಿ ಬಸ್ಸು ಮತ್ತು ಟ್ರಾಕ್ಟರ್ ನಡುವೆ ಅಪಘಾತವಾಗಿದೆ ಎಂದು ನಮೂದಾಗಿದೆ ಎಂದರೆ ಸರಿ. ನಿಪಿ-4 ರಲ್ಲಿ ಎಲ್ಲೂ ಟ್ರೈಲರ್ ಇದ್ದ ಬಗ್ಗೆ ನಮೂದಾಗಿಲ್ಲ ಎಂದರೆ ಸರಿ. ಎಂಇಸಿ 3932 ಟ್ರೈಲರ್ ನಿಂದ ನನಗೆ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ಸದರಿ ಟ್ರೈಲರ್ ನ್ನು ಸೇರಿಸಲಾಗಿದೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ಕಾರಣದಿಂದ ವಿಮಾ ಕಂಪನಿಯವರು ಪರಿಹಾರ ನೀಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಮೆಡಿಕಲ್ ಬಿಲ್ಲುಗಳು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 1 ಮತ್ತು 2 ನೇ ಎದುರುದಾರರ ಪರ ವಕೀಲರಿಂದ -

1 ಮತ್ತು 2 ನೇ ಎದುರುದಾರರು ಯಾವುದೇ ಪರಿಹಾರ ನೀಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ
ನ್ಯಾಯಾಲಯ, ದಾವಣಗೆರೆ